

# ಗೆಜ್ಜೆ ಸದ್ದು ಮಾಡುತಾವೊ

ಒಡವೆಗಳಲ್ಲಿ ಗೆಜ್ಜೆ ಆಭರಣಕ್ಕೆ ಎಲ್ಲ ಕಾಲದಲ್ಲೂ ಬೇಡಿಕೆ. ಕಾಲ್ಗೆಜ್ಜೆ, ಕೈಬಳೆ, ಕಿವಿಯೋಲೆ ಎಲ್ಲದರಲ್ಲೂ ಗೆಜ್ಜೆ ಒಡವೆಗಳು ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ.

■ ಆಶಾ ಎಸ್. ಕುಲಕರ್ಣಿ

ಟ್ರೆಂಡಿ ಗೆಜ್ಜೆಗಳು ಈಗ ಸಪ್ಪಳ ಮಾಡಲಾರಂಭಿಸಿವೆ. ಫ್ಯಾಷನಬಲ್ ಕಾಲ್ಗೆಜ್ಜೆಗಳ ಜೊತೆಗೆ ಇತರ ಗೆಜ್ಜೆ ಆಭರಣಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಮಹಿಳೆಯರು ಗೆಜ್ಜೆ ಜೊತೆ ಭಾವನಾತ್ಮಕ ನಂಟು ಬೆಳೆಸಿಕೊಂಡಿದ್ದು, ಸಾಂಪ್ರದಾಯಿಕತೆ, ಆಧುನಿಕತೆ ಎರಡರೊಂದಿಗೂ ಇದು ತಳುಕು ಹಾಕಿಕೊಂಡಿದೆ. ಈಗ ಮಣಿಗಳಿಂದ ಕೂಡಿದ ಗೆಜ್ಜೆ, ಬೀಡ್ಸ್‌ಗಳು, ಬಣ್ಣ ಬಣ್ಣದ ಹರಳುಗಳು, ಕುಂದನ್‌ಗಳಿಂದ ಮಾಡಿದ ಗೆಜ್ಜೆಗಳು ಬಂದಿದ್ದು ಘಲ್ ಘಲ್ ನಾದದೊಂದಿಗೆ ಆಕರ್ಷಕವೂ ಆಗಿದೆ. ಸಿಂಪಲ್ ಗೆಜ್ಜೆ ಮಣಿಗಳ ಜೊತೆಗೆ ಕಾಲುಂಗುರವೂ ಹೊಂದಿಕೊಂಡ 'ಟು ಇನ್ ವನ್ ಗೆಜ್ಜೆ' ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ.

ಒಡವೆಗೂ ಮಹಿಳೆಯರಿಗೂ ಎಲ್ಲಿಲ್ಲದ ಅವಿನಾಭಾವ ನಂಟು. ಹಬ್ಬಹರಿದಿನ, ಮದುವೆ, ಮುಂಜಿ ಹೀಗೆ ಯಾವುದೇ ಶುಭ ಸಮಾರಂಭಗಳಿರಲಿ, ಎಲ್ಲರ ಕಣ್ಣು ಯಾವ್ಯಾವ ಮಹಿಳೆ ಏನೇನು ಆಭರಣ ಧರಿಸಿದ್ದಾಳೆ ಎಂಬುದರ ಮೇಲೆ ನೆಟ್ಟಿರುತ್ತದೆ. ಅದು ಚಿನ್ನದ ಆಭರಣವೇ ಇರಲಿ, ಬೆಳ್ಳಿಯ ಆಭರಣವೇ ಇರಲಿ, ಇಲ್ಲವೇ ಆರ್ಟಿಫಿಶಿಯಲ್ ಆಭರಣಗಳೇ ಇರಲಿ ನೋಡಲು ಚೆನ್ನಾಗಿದ್ದು, ಧರಿಸಿದಾಗ ಸುಂದರವಾಗಿ ಕಂಡರೆ ಸಾಕು. ಎಲ್ಲರ ಗಮನ ಅವರತ್ತಲೇ ಸೆಳೆಯುತ್ತಿರುತ್ತದೆ.

ಗೆಜ್ಜೆಗಳಿಂದ ಕೂಡಿದ ಆಭರಣ ಇಂದು ಹೊಸ ಹವಾ ಸೃಷ್ಟಿ ಮಾಡಿದೆ. ಹಿಂದೆಲ್ಲಾ, ಗೆಜ್ಜೆ ಎಂದರೆ ಅಂದೊಂದು ಸಾಂಪ್ರದಾಯಿಕ ಆಭರಣ. ಅದು ಕಾಲುಗಳಿಗೆ ಮಾತ್ರ ಸೀಮಿತ ಎಂಬ ಭಾವನೆಯಿತ್ತು. ಮನೆಯಲ್ಲಿ ಹೆಣ್ಣು ಮಗು ಜನಿಸಿದರೆ ಎಲ್ಲರೂ ಕಾಲ್ಗೆಜ್ಜೆಯನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಆದರೆ ಯಾವಾಗ ಮಾಡೆಲ್‌ಗಳು ಹಾಗೂ ಚಿತ್ರನಟಿಯರು ರ್‍ಯಾಂಪ್ ಮೇಲೆ ಗೆಜ್ಜೆ ಆಭರಣಗಳನ್ನು ತೊಟ್ಟು ಫ್ಯಾಷನ್ ಟ್ರೆಂಡ್‌ಗೆ ನಾಂದಿ ಹಾಡಿದರೋ, ಅಂದಿನಿಂದ ಗೆಜ್ಜೆಯ ಆಭರಣಗಳಿಗೆ ಎಲ್ಲಿಲ್ಲದ ಮಾನ್ಯತೆ ದೊರೆತಿದೆ.

ಇದೀಗ ಯುವತಿಯರು ಹೆಚ್ಚಾಗಿ ಗೆಜ್ಜೆ ಆಭರಣಗಳನ್ನು ಇಷ್ಟಪಡುತ್ತಿದ್ದಾರೆ. ನಾನಾ ಬಣ್ಣಗಳ ಮಣಿಗಳನ್ನು ಒಳಗೊಂಡ ಗೊಂಚಲು ಒಡವೆ ಟ್ರೆಂಡಿಂಗ್‌ನಲ್ಲಿದೆ. ಮಹಿಳೆಯರ ಅಭಿರುಚಿಗೆ ಅನುಗುಣವಾಗಿ ಬಂಗಾರದಲ್ಲಿ ಕೂಡ ಮುತ್ತುಗಳ ಗೊಂಚಲು ಹಾಗೂ ಗೆಜ್ಜೆಯನ್ನು ಮಣಿಗಳೊಂದಿಗೆ ಸಂಯೋಜನೆ ಮಾಡಿದ ವಿಭಿನ್ನ ರೀತಿಯ ಹಾರ, ಕಿವಿಯೋಲೆ, ಬ್ರೇಸ್ಲೆಟ್‌ಗಳನ್ನು ತಯಾರಿಸಿ ಫ್ಯಾಷನ್‌ಗೆ ಒಂದು ಹೊಸ ರೂಪವನ್ನೇ ನೀಡಲಾಗಿದೆ. ಇವು ಸಾಂಪ್ರದಾಯಿಕ ಹಾಗೂ ಸ್ಟೈಲಿಷ್ ಲುಕ್ ನೀಡಲು ಸಹಕಾರಿ. ಸೀರೆ ಅಥವಾ ಯಾವುದೇ ಉಡುಪಿಗೂ ಮ್ಯಾಚ್ ಮಾಡಿಕೊಳ್ಳಬಹುದು ಈ ಗೆಜ್ಜೆ ಆಭರಣಗಳನ್ನು. ವಿವಿಧ ಬಣ್ಣಗಳ ದಾರದೊಂದಿಗೆ ಪೋಣಿಸಿದ ಗೆಜ್ಜೆಯ ಗೊಂಚಲು ಹಾರಗಳು ಇದೀಗ ಯುವತಿಯರ ಹಾಟ್ ಫೇವರೆಟ್ ಆಗಿದೆ.

ಮದುವೆ ಅಥವಾ ಇತರ ಶುಭ ಸಮಾರಂಭಗಳಲ್ಲಿ ಧರಿಸುವ ರೇಷ್ಮೆ ಸೀರೆ, ಗಾಗ್ರಾ, ಲೆಹೆಂಗಾಗಳಿಗೆ